ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಇತರೆ ರಾಜ್ಯಗಳ ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 10/03/2020

# ಕಮಲ್ ಸರ್ಕಾರಕ್ಕೆ ಸಿಂಧಿಯಾ ಸವಾಲ್

## ಬೆಂಗಳೂರಿಗೆ ಬಂದ ಕಾಂಗ್ರೆಸ್‌ನ 18 ಶಾಸಕರು

**ಭೋಪಾಲ್:** ಮಧ್ಯಪ್ರದೇಶದಲ್ಲಿ ಗರಿಗೆದರಿರುವ ಬಿರುಸಿನ ರಾಜಕೀಯ ಚಟುವಟಿಕೆಗಳು ಹೊಸತೊಂದು ಕುತೂಹಲಕಾರಿ ತಿರುವು ಪಡೆದುಕೊಂಡಿವೆ.

ಸೋಮವಾರ ಮಧ್ಯಪ್ರದೇಶದ ಸುಮಾರು 18 ಶಾಸಕರು ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ತೆರಳಿದ್ದಾರೆ. ಇವರಲ್ಲಿ ಐವರು ಸಚಿವರೂ ಇದ್ದಾರೆ ಎನ್ನಲಾಗಿದೆ. ಇವರು ಪಕ್ಷದ ಮತ್ತೊಬ್ಬ ನಾಯಕ ಜ್ಯೋತಿರಾದಿತ್ಯ ಸಿಂಧಿಯಾ ಅವರ ಆಪ್ತರು ಎಂದು ಹೇಳಲಾಗುತ್ತಿದೆ.

**ಅಲ್ಲಿ ಮಾತುಕತೆ, ಇಲ್ಲಿ ಪಲಾಯನ!:** ಇತ್ತೀಚೆಗಷ್ಟೇ ಬೆಂಗಳೂರಿಗೆ ಬಂದಿದ್ದ ಮಧ್ಯಪ್ರದೇಶದ ಹತ್ತು ಕಾಂಗ್ರೆಸ್ ಶಾಸಕರಲ್ಲಿ ಎಂಟು ಮಂದಿ ತವರಿಗೆ ಮರಳಿದ್ದರು. ಆದಾಗ್ಯೂ ಅಲ್ಲಿ ಬೂದಿ ಮುಚ್ಚಿದ ಕೆಂಡದಂತಹ ಪರಿಸ್ಥಿತಿ ಇರುವ ಹಿನ್ನೆಲೆಯಲ್ಲಿ, ಸೋಮವಾರ ನವದೆಹಲಿಯಲ್ಲಿ ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿಯನ್ನು ಭೇಟಿ ಯಾಗಿದ್ದ ಸಿಎಂ ಕಮಲ್‌ನಾಥ್, ಸಂಪುಟ ವಿಸ್ತರಣೆ ಬಗ್ಗೆ ಮಾತುಕತೆ ನಡೆಸಿದ್ದರು. ಆ ಮೂಲಕ ಪಕ್ಷದಲ್ಲಿನ ಅತೃಪ್ತರಿಗೆ ಸೂಕ್ತ ಖಾತೆಗಳನ್ನು ಹಂಚಿಕೆ ಮಾಡುವ ಮೂಲಕ ಅವರನ್ನು ಒಲೈಕೆ ಮಾಡುವ ಬಗ್ಗೆ ಪ್ರಸ್ತಾಪ ಮಾಡಿದ್ದರು. ದೆಹಲಿಯಲ್ಲಿ ನಾಯಕ ಮಾತುಕತೆ ಮುಗಿದ 2-3 ಗಂಟೆಯಲ್ಲೇ ಭೋಪಾಲ್‌ನಲ್ಲಿದ್ದ ಕಾಂಗ್ರೆಸ್‌ನ 18 ಶಾಸಕರ ತಂಡ ಏಕಾಏಕಿ 'ಗಾಯಬ್' ಆಗಿರುವುದು ರಾಜಕೀಯ ವಲಯದಲ್ಲಿ ದೊಡ್ಡಮಟ್ಟದ ಚರ್ಚೆಗೆ ನಾಂದಿ ಹಾಡಿದೆ.

**'ನಾಟ್ ರೀಚಬಲ್' ತಲೆನೋವು!:** ಉದ್ಯಾನ ನಗರಿಗೆ ಹಾರಿ ಬಂದಿರುವ ಅಷ್ಟೂ 'ಕೈ' ನಾಯಕರ ಮೊಬೈಲ್‌ಗಳು ಸ್ವಿಚ್ ಆಫ್ ಆಗಿವೆ ಎಂದು ಮೂಲಗಳು ತಿಳಿಸಿವೆ. ಅವರನ್ನು ಸಂಪರ್ಕಿಸಲು ಕಾಂಗ್ರೆಸ್ ಹೈಕಮಾಂಡ್ ಸೇರಿದಂತೆ ಕಾಂಗ್ರೆಸ್ ಉಳಿದೆಲ್ಲಾ ನಾಯಕರು ಭಗೀರಥ ಪ್ರಯತ್ನ ಮಾಡುತ್ತಿದ್ದಾರೆ. ಅವರೆಲ್ಲರ ಪಾಲಿಗೆ ವಲಸೆ ಹಕ್ಕಿಗಳು 'ನಾಟ್ ರೀಚೆಬಲ್' ಆಗಿರುವುದು ಪರಿಸ್ಥಿತಿಯನ್ನು ಕಾಂಗ್ರೆಸ್ ಪಾಲಿಗೆ ಮತ್ತಷ್ಟು ಕಗ್ಗಂಟಾಗಿಸಿದೆ ಎನ್ನಲಾಗಿದೆ.





**ಅವರಿಬ್ಬರು ಎಲ್ಲಿ?:** ಇತ್ತೀಚೆಗಷ್ಟೇ, ಮಧ್ಯಪ್ರದೇಶದಿಂದ ಕಾಲ್ಕಿತ್ತು ಬೆಂಗಳೂರಿಗೆ ಬಂದಿದ್ದ 10 ಶಾಸಕರ ತಂಡದಲ್ಲಿದ್ದ ಬಿಸಾಹು ಲಾಲ್ ಸಿಂಗ್ ಅವರು, ಭಾನುವಾರ ಭೋಪಾಲ್‌ಗೆ ಮರಳಿದ್ದಾರೆ. ಸತತ ಆರು ದಿನಗಳ ಕಾಲ ನಾಪತ್ತೆಯಾಗಿದ್ದ ಸಿಂಗ್, ಕಮಲ್‌ನಾಥ್ ಸಂಪುಟದಲ್ಲಿ ಪ್ರಮುಖ ಸ್ಥಾನ ನೀಡಬೇಕೆಂದು ಪಟ್ಟು ಹಿಡಿದಿದ್ದರು. ಇವರ ಆಗಮನದಿಂದಾಗಿ ಕಳೆದ 6 ದಿನಗಳಿಂದ ನಾಪತ್ತೆಯಾಗಿದ್ದ 10ರಲ್ಲಿ 8 ಶಾಸಕರು ತವರಿಗೆ ಮರಳಿದಂತಾಗಿದೆ. ಆದರೆ, ಇನ್ನುಳಿದ ಇಬ್ಬರು ಶಾಸಕರ ಸುಳಿವು ಸಿಕ್ಕಿಲ್ಲ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ. ಭೋಪಾಲ್‌ಗೆ ಮರಳಿರುವ ಶಾಸಕರನ್ನು ಜ್ಯೋತಿರಾದಿತ್ಯ ಸಿಂದಿಯಾ ಭೇಟಿ ಮಾಡಿ ಮಾತುಕತೆ ನಡೆಸಲಿದ್ದಾರೆಂದು ಮೂಲಗಳು ತಿಳಿಸಿವೆ.

# ಸಿಎಂ ಕಮಲ್‌ನಾಥ್ ಸಂಪುಟ ರಾಜೀನಾಮೆ

ಮಧ್ಯಪ್ರದೇಶದಲ್ಲಿ ನಡೆದ ಹಠಾತ್ ಬೆಳವಣಿಗೆಯಲ್ಲಿ ಸಿಎಂ ಕಮಲ್‌ನಾಥ್ ಸಂಪುಟದ ಎಲ್ಲಾ ಸಚಿವರು ರಾಜೀನಾಮೆ ನೀಡಿದ್ದಾರೆ. ಕಾಮರಾಜ್ ಸೂತ್ರ ಅನುಸರಿಸಲು ಮುಂದಾಗಿರುವ ಅವರು, ಭಿನ್ನಮತೀಯ ಶಾಸಕರಿಗೆ ಕೆಲ ಸ್ಥಾನಗಳನ್ನು ನೀಡಿ ಮೂಲಕ ಸರ್ಕಾರ ಉಳಿಸಿಕೊಳ್ಳುವ ಪ್ರಯತ್ನಕ್ಕೆ ಮುಂದಾಗಲಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದೆ. ತಡ ರಾತ್ರಿಯ ಬೆಳವಣಿಗೆಯಲ್ಲಿ 22 ಸಚಿವರು ಸಿಎಂ ನೇತೃತ್ವದಲ್ಲಿ ನಡೆದ ಸಂಪುಟ ಸಭೆಯ ಬಳಿಕ ರಾಜೀನಾಮೆ ನೀಡಿದ್ದಾರೆ. ಭೋಪಾಲ್‌ನಲ್ಲಿ ಮಾತನಾಡಿದ ಸಿಎಂ ಕಮಲ್‌ನಾಥ್, ಜನರ ಪ್ರೀತಿಯೇ ನನ್ನ ಶಕ್ತಿ. ಮಾಫಿಯಾಗಳ ಮೂಲಕ ಅಸ್ಥಿರತೆ ಉಂಟು ಮಾಡುವುದಕ್ಕೆ ಅವಕಾಶ ನೀಡುವುದಿಲ್ಲ ಎಂದಿದ್ದಾರೆ.

ಈ ನಡುವೆ ನವದೆಹಲಿಯಲ್ಲಿ ಗೃಹ ಸಚಿವ ಅಮಿತ್ ಶಾ ಬೆಳವಣಿಗೆ ಬಗ್ಗೆ ಬಿಜೆಪಿ ನಾಯಕರ ಸಭೆ ನಡೆಸಿದರು. ಕಾಂಗ್ರೆಸ್ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ ಪಕ್ಷದ ನಾಯಕರ ಸಭೆ ನಡೆಸಿದ್ದಾರೆ. ಈ ನಡುವೆ ಮಂಗಳವಾರ ಭೋಪಾಲದಲ್ಲಿ ಕಾಂಗ್ರೆಸ್ ಶಾಸಕಾಂಗ ಸಭೆ ನಡೆಯಲಿದೆ. ಇದೇ ವೇಳೆ ಜ್ಯೋತಿರಾದಿತ್ಯ ಸಿಂಧಿಯಾ ಪ್ರಾದೇಶಿಕ ಪಕ್ಷ ರಚನೆ ಮಾಡಲಿದ್ದಾರೆ. ಬಿಜೆಪಿ ಮೂಲಕ ಅವರು ರಾಜ್ಯಸಭೆ ಪ್ರವೇಶಿಸಲಿದ್ದಾರೆಂದು ವರದಿಯಾಗಿದೆ.